ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ: ಪಪೂಶಿಇ/ಪರೀಕ್ಷೆ/ಖಾ.ಅ.ನೊ./2015-16. ದಿನಾಂಕ:31 -08-2015.

## ಅಧಿಸೂಚನೆ

ವಿಷಯ: 2016ರ ಮಾರ್ಚ್ ತಿಂಗಳಿನಲ್ಲಿ ನಡೆಸಲಾಗುವ ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಳ್ಳುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಇಡಿ 242 ಟಿಪಿಯು 81 ದಿ: 02-11-1981.
2) ಸರ್ಕಾರದ ಪತ್ರ ಸಂಖ್ಯೆ: ಇಡಿ 125 ಟಿಪಿಯು 90 ದಿ: 03-07-1992.
3) ಸರ್ಕಾರದ ಆದೇಶ ಸಂಖ್ಯೆ: ಇಡಿ 159 ಟಿಪಿಯು 96 ದಿ: 20-09-1996.
4) ಸರ್ಕಾರದ ಆದೇಶ ಸಂಖ್ಯೆ: ಇಡಿ 09 ಟಿಪಿಯು 2005 ದಿ: 31-05-2005.

* * * * *

ಪದವಿ ಪೂರ್ವ ಶಿಕ್ಷಣ ಇಲಾಖೆಯು ನಡೆಸುತ್ತಿರುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಉಲ್ಲೇಖಿತ ಸರ್ಕಾರದ ಆದೇಶದನ್ವಯ ಪಿಯುಸಿ ಶಿಕ್ಷಣ ಬೋಧಿಸುವ **ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಾತ್ರ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿಕೊಡಲಾಗಿದೆ.** ಅದರಂತೆ 2016ರ ಮಾರ್ಚ್ ತಿಂಗಳಿನಲ್ಲಿ ನಡೆಸಲಾಗುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳು ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಲು. OMR ಅರ್ಜಿಗಳನ್ನು ಈ ಅಧಿಸೂಚನೆಯೊಂದಿಗೆ ಕಳುಹಿಸಿಕೊಡಲಾಗಿದೆ. ದಿನಾಂಕ **05-09-2015**ರಿಂದ ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ.

OMR ನಮೂನೆಗಳಲ್ಲಿ ಅಭ್ಯರ್ಥಿಯ ವಿವರಗಳನ್ನು ಭರ್ತಿ ಮಾಡಿ ಶೇಡಿಂಗ್ ಮಾಡುವಲ್ಲಿ ಪ್ರಾಂಶುಪಾಲರು ಉಪನ್ಯಾಸಕರ ಸಹಕಾರವನ್ನು ಪಡೆದುಕೊಳ್ಳುವುದು. ಅಭ್ಯರ್ಥಿಯ ಭಾವಚಿತ್ರವನ್ನು ಖಾತರಿಪಡಿಸಿಕೊಂಡು OMR ನಮೂನೆಯ ನಿಗದಿತ ಅಂಕಣದಲ್ಲಿ ಅಂಟಿಸಿ ಅಭ್ಯರ್ಥಿಯ ಸಹಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳುವುದು. OMR ನಮೂನೆಯಲ್ಲಿನ ವಿವರಗಳನ್ನು ಮತ್ತು ಭಾವಚಿತ್ರಗಳನ್ನು ಸ್ಕ್ಯಾನಿಂಗ್ ಮಾಡಲಾಗುವುದರಿಂದ ಹೆಚ್ಚು ಎಚ್ಚರಿಕೆ ವಹಿಸುವುದು. OMR ನಮೂನೆಗಳಲ್ಲಿ ವಿವರಗಳನ್ನು ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದಲೇ ಭರ್ತಿ ಮಾಡಿ ಶೇಡಿಂಗ್ ಮಾಡುವುದು. **OMR ನಮೂನೆಗಳಿಗೆ ಕ್ರಮಾಂಕಗಳನ್ನು 6001 ರಿಂದ ನೀಡುವುದು.**

### I. ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಲು ಕಡ್ಡಾಯವಾಗಿ ಇರಬೇಕಾದ ಅರ್ಹತೆಗಳು ಹಾಗೂ ಸೂಚನೆಗಳು :

1. ದಿನಾಂಕ **31-03-2016**ಕ್ಕೆ **17** ವರ್ಷಗಳು ತುಂಬಿರಬೇಕು (**31-03-1999**ರ ಮೊದಲು ಜನಿಸಿರಬೇಕು).
2. ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ. / ಸಿ.ಬಿ.ಎಸ್.ಇ., ಐ.ಸಿ.ಎಸ್.ಇ., ಎನ್.ಐ.ಒ.ಎಸ್. ಗಳಲ್ಲಿ ವ್ಯಾಸಂಗ ಮಾಡಿ ಹಾಗೂ 2015ರ ಜೂನ್ ಅಥವಾ ಅದಕ್ಕೂ ಹಿಂದಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.
3. ಇತರೆ ರಾಜ್ಯಗಳ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. / 10ನೇ ತರಗತಿ ಪರೀಕ್ಷೆ ತೆಗೆದುಕೊಂಡು, ಪರೀಕ್ಷೆಗೆ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಥವಾ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿ ತೇರ್ಗಡೆ ಹೊಂದಿರಬೇಕು ಹಾಗೂ 2015ರ ಜೂನ್ ಅಥವಾ ಅದಕ್ಕೂ ಹಿಂದಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.
4. ಪ್ರಥಮ ಪಿ.ಯು.ಸಿ. ಅನುತ್ತೀರ್ಣರಾದವರು, ಪರೀಕ್ಷೆಗೆ ಹಾಜರಾಗದವರು, ವ್ಯಾಸಂಗವನ್ನು ಮುಂದುವರಿಸದವರು ಖಾಸಗಿ ಅಭ್ಯರ್ಥಿಯಾಗಿ ತಮ್ಮ ಹೆಸರನ್ನು ನೋಂದಾಯಿಸಲು ಅರ್ಹರಾಗಿರುತ್ತಾರೆ.

5. ಕರ್ನಾಟಕ ರಾಜ್ಯದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಐ.ಟಿ.ಐ., ಜೆ.ಓ.ಸಿ., ಡಿಪ್ಲೊಮೊ ಇತ್ಯಾದಿ ತರಗತಿಗಳಿಗೆ ದಾಖಲಾಗಿ ಅನುತ್ತೀರ್ಣಗೊಂಡು ಅಲ್ಲಿ ವ್ಯಾಸಂಗ ಮುಂದುವರಿಸದವರು ಖಾಸಗಿ ಅಭ್ಯರ್ಥಿಯಾಗಿ ತಮ್ಮ ಹೆಸರನ್ನು ನೋಂದಾಯಿಸಲು ಅರ್ಹರಾಗಿರುತ್ತಾರೆ. ಇಂತಹ ವಿದ್ಯಾರ್ಥಿಗಳು ವಾಸ್ಯಂಗ ಮಾಡಿದ ಕಾಲೇಜಿನಿಂದ **ಕಡ್ಡಾಯವಾಗಿ ಮೂಲ ವರ್ಗಾವಣೆ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಬೇಕು.**

6. ಬೆಂಗಳೂರು ನಗರ ಜಿಲ್ಲೆಯಲ್ಲಿನ ಅಭ್ಯರ್ಥಿಗಳು ಕಡ್ಡಾಯವಾಗಿ ಬೆಂಗಳೂರು ನಗರದ ಅವರ ವಾಸಸ್ಥಳದ ಹತ್ತಿರದಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿಯೇ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು.

7. ಬೆಂಗಳೂರು ಉತ್ತರ, ದಕ್ಷಿಣ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ಬೇರೆ ಜಿಲ್ಲೆಗಳಲ್ಲಿ ಅಭ್ಯರ್ಥಿಯು ತನ್ನ ವಾಸಸ್ಥಾನಕ್ಕೆ ಹತ್ತಿರವಾಗಿರುವ ಅಥವಾ ಉದ್ಯೋಗ ಮಾಡುವ ಸ್ಥಳಕ್ಕೆ ಸಮೀಪದಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಾತ್ರ ಹೆಸರನ್ನು ನೋಂದಾಯಿಸಿಕೊಳ್ಳಲು ಅವಕಾಶವಿದೆ.

8. ವಾಸಸ್ಥಳದ ಖಾತರಿಗಾಗಿ ವಾಸಸ್ಥಳ ವಿಳಾಸ ವಿವರವಿರುವ ಈ ಕೆಳಗಿನ ಯಾವುದಾದರು ಒಂದು ದೃಢೀಕರಿಸಿದ ದಾಖಲೆಯನ್ನು ಸಲ್ಲಿಸುವುದು :
   a. ಮತದಾರರ ಗುರುತು ಚೀಟಿ.
   b. ಪಡಿತರ ಚೀಟಿ.
   c. ಬ್ಯಾಂಕ್ ಖಾತೆ ಪಾಸ್ ಬುಕ್.
   d. ಡ್ರೈವಿಂಗ್ ಲೈಸನ್ಸ್.

**II.** **ಖಾಸಗಿ ಅಭ್ಯರ್ಥಿಗಳು ಭಾಗ-1ರಲ್ಲಿ ಎರಡು ಭಾಷಾ ವಿಷಯಗಳನ್ನು ಹಾಗೂ ಭಾಗ-2ರಲ್ಲಿ ಕಲಾ ಅಥವಾ ವಾಣಿಜ್ಯ ಸಂಯೋಜನೆಯಲ್ಲಿ ಮಾತ್ರ ನಾಲ್ಕು ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು.**

**ಭಾಗ-1: (Part – 1)**

| ಕ್ರ. ಸಂ. | ವಿಷಯ | Subject | ವಿಷಯ ಸಂಕೇತ |
|---|---|---|---|
| 1. | ಕನ್ನಡ | Kannada | 01 |
| 2. | ಇಂಗ್ಲೀಷ್ | English | 02 |
| 3. | ಹಿಂದಿ | Hindi | 03 |
| 4. | ತಮಿಳು | Tamil | 04 |
| 5. | ತೆಲಗು | Telugu | 05 |
| 6. | ಮಲಯಾಳಂ | Malayalam | 06 |
| 7. | ಮರಾಠಿ | Marathi | 07 |
| 8. | ಉರ್ದು | Urdu | 08 |
| 9. | ಸಂಸ್ಕೃತ | Sanskrit | 09 |
| 10. | ಅರೇಬಿಕ್ | Arabic | 11 |

**ಭಾಗ-2:**

**(ಭಾಗ-2 ರಲ್ಲಿ ಈ ಕೆಳಗೆ ನೀಡಿರುವ ವೃಂದಗಳಂತೆ ಮಾತ್ರ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು)**

**ಕಲಾ ಸಂಯೋಜನೆ:**

| ವೃ. ಸಂ | ವಿಷಯಗಳು ಹಾಗೂ ವಿಷಯ ಸಂಕೇತ ಸಂಖ್ಯೆ | | | | | | | |
|---|---|---|---|---|---|---|---|---|
| 1. | ಇತಿಹಾಸ | 21 | ಅರ್ಥಶಾಸ್ತ್ರ | 22 | ಸಮಾಜಶಾಶ್ತ್ರ | 28 | ರಾಜ್ಯಶಾಸ್ತ್ರ | 29 |
| 2. | ಇತಿಹಾಸ | 21 | ಅರ್ಥಶಾಸ್ತ್ರ | 22 | ಭೂಗೋಳಶಾಸ್ತ್ರ | 24 | ರಾಜ್ಯಶಾಸ್ತ್ರ | 29 |
| 3. | ಇತಿಹಾಸ | 21 | ಅರ್ಥಶಾಸ್ತ್ರ | 22 | ತರ್ಕಶಾಸ್ತ್ರ | 23 | ರಾಜ್ಯಶಾಸ್ತ್ರ | 29 |
| 4. | ಇತಿಹಾಸ | 21 | ಅರ್ಥಶಾಸ್ತ್ರ | 22 | ರಾಜ್ಯಶಾಸ್ತ್ರ | 29 | ಐಚ್ಛಿಕ ಕನ್ನಡ | 16 |
| 5. | ಇತಿಹಾಸ | 21 | ಅರ್ಥಶಾಸ್ತ್ರ | 22 | ರಾಜ್ಯಶಾಸ್ತ್ರ | 29 | ಶಿಕ್ಷಣ | 52 |
| 6. | ಇತಿಹಾಸ | 21 | ಅರ್ಥಶಾಸ್ತ್ರ | 22 | ಸಮಾಜಶಾಸ್ತ್ರ | 28 | ಶಿಕ್ಷಣ | 52 |

ವಾಣಿಜ್ಯ ಸಂಯೋಜನೆ :

| ಕ್ರ. ಸಂ | ವಿಷಯಗಳು ಹಾಗೂ ವಿಷಯ ಸಂಕೇತ ಸಂಖ್ಯೆ | | | | | | | |
|---|---|---|---|---|---|---|---|---|
| 1. | ಇತಿಹಾಸ | 21 | ಅರ್ಥಶಾಸ್ತ್ರ | 22 | ಬಿಸಿನೆಸ್ ಸ್ಟಡೀಸ್ | 27 | ಲೆಕ್ಕಶಾಸ್ತ್ರ | 30 |
| 2. | ಅರ್ಥಶಾಸ್ತ್ರ | 22 | ಭೂಗೋಳಶಾಸ್ತ್ರ | 24 | ಬಿಸಿನೆಸ್ ಸ್ಟಡೀಸ್ | 27 | ಲೆಕ್ಕಶಾಸ್ತ್ರ | 30 |
| 3. | ಅರ್ಥಶಾಸ್ತ್ರ | 22 | ಬಿಸಿನೆಸ್ ಸ್ಟಡೀಸ್ | 27 | ಲೆಕ್ಕಶಾಸ್ತ್ರ | 30 | ಬೇಸಿಕ್ ಮ್ಯಾಥ್ಸ್ | 75 |
| 4. | ಬಿಸಿನೆಸ್ ಸ್ಟಡೀಸ್ | 27 | ಲೆಕ್ಕಶಾಸ್ತ್ರ | 30 | ಬೆಸಿಕ್ ಮ್ಯಾಥ್ಸ್ | 75 | ಸಂಖ್ಯಾಶಾಸ್ತ್ರ | 31 |

**(Part – 2)**

(Candidates should select subjects as per the Group)

**Arts Combination:**

| Group No. | Subjects & Subject Code Numbers | | | | | | | |
|---|---|---|---|---|---|---|---|---|
| 1. | History | 21 | Economics | 22 | Sociology | 28 | Political Science | 29 |
| 2. | History | 21 | Economics | 22 | Geography | 24 | Political Science | 29 |
| 3. | History | 21 | Economics | 22 | Logic | 23 | Political Science | 29 |
| 4. | History | 21 | Economics | 22 | Political Science | 29 | Optional Kannada | 16 |
| 5. | History | 21 | Economics | 22 | Political Science | 29 | Education | 52 |
| 6. | History | 21 | Economics | 22 | Sociology | 28 | Education | 52 |

**Commerce Combination:**

| Group No. | Subjects & Subject Code Numbers | | | | | | | |
|---|---|---|---|---|---|---|---|---|
| 1. | History | 21 | Economics | 22 | Business | 27 | Accountancy | 30 |
| 2. | Economics | 22 | Geography | 24 | Business | 27 | Accountancy | 30 |
| 3. | Economics | 22 | Business | 27 | Accountancy | 30 | Basic Maths | 75 |
| 4. | Business Studies | 27 | Accountancy | 30 | Basic Maths | 75 | Statistics | 31 |

ವಿಶೇಷ ಸೂಚನೆ:

1. ರೆಗ್ಯೂಲರ್ ಅಥವಾ ರಿಪೀಟರ್ ಅಭ್ಯರ್ಥಿಗಳಾಗಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ದ್ವಿತೀಯ ಪಿ.ಯು.ಸಿ. ಪರೀಕ್ಷೆಗೆ ಹಾಜರಾಗುವವರು ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳುವುದನ್ನು ನಿಷೇದಿಸಲಾಗಿದೆ.
2. ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅರ್ಹವಲ್ಲದ ಅರ್ಜಿಯನ್ನು ಇಲಾಖೆಯು ತಿರಸ್ಕರಿಸಿದಲ್ಲಿ ಪಾವತಿಸಿರುವ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ. ಇದಕ್ಕೆ ಪ್ರಾಂಶುಪಾಲರೇ ನೇರ ಜವಾಬ್ದಾರರಾಗುವರು ಮತ್ತು ಅವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

**III.** ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಲು ಇರುವ ನಿಬಂಧನೆಗಳು ಹಾಗೂ ಶುಲ್ಕಗಳ ವಿವರ:

1. ಖಾಸಗಿ ಅಭ್ಯರ್ಥಿಗಳು ಇಲಾಖೆಯು ನಿಗದಿಪಡಿಸುವ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ. ಯಾವುದೇ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗೆ ನೋಂದಾಯಿಸಿಕೊಂಡಿರುವ ಕಾಲೇಜು ಅಥವಾ ಇತರೆ ಯಾವುದೇ ನಿಗದಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯುವಂತೆ ಸೂಚಿಸಲಾಗುವುದು.
2. ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಂಡಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅರ್ಹ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಕಳುಹಿಸಲಾಗುವುದು.

**ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳುವ ಸಮಯದಲ್ಲಿ ಪ್ರತಿ ವಿದ್ಯಾರ್ಥಿಯು ಕಾಲೇಜಿನಲ್ಲಿ ಪಾವತಿಸಬೇಕಾದ ಶುಲ್ಕದ ವಿವರ:**

| ಕ್ರ. ಸಂ. | ಶುಲ್ಕದ ವಿವರ | ಇತರರು | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ |
|---|---|---|---|
| | | ₹. | ₹. |
| 1 | ನೋಂದಣಿ ಶುಲ್ಕ (Registration Fee) (ನೋಂದಣಿ ಶುಲ್ಕವನ್ನು ಕಾಲೇಜಿನಲ್ಲಿಯೇ ಉಳಿಸಿಕ್ಕೊಂಡು ಅಂಚೆ ವೆಚ್ಚ ಹಾಗೂ ಪರಿಶೀಲನಾ ಶುಲ್ಕವಾಗಿ ಪ್ರಾಂಶುಪಾಲರು ಮತ್ತು ಸಿಬ್ಬಂದಿ ಉಪಯೋಗಿಸಬಹುದು). | 60-00 | 60-00 |
| 2 | ದಾಖಲಾತಿ ಶುಲ್ಕ (Admission Fee common to all) | 252-00 | 252-00 |
| 2 'A' | ಕಾಲೇಜು ಅಭಿವೃದ್ಧಿ ಶುಲ್ಕ (ವಸೂಲಾದ ಈ ಶುಲ್ಕವನ್ನು ಕಾಲೇಜು ಸಂಚಿತ ನಿಧಿಗೆ ಜಮೆ ಮಾಡಿ ಮೂಲಭೂತ ಸೌಕರ್ಯಗಳಿಗಾಗಿ ಉಪಯೋಗಿಸಲು ಪ್ರಸ್ತಾವನೆ ಕಳುಹಿಸಿ ನಿರ್ದೇಶಕರ ಅನುಮತಿ ಪಡೆಯಬೇಕು | 1,020-00 | 1,020-00 |
| 3 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ (ಪರೀಕ್ಷಾ ಶುಲ್ಕ) ಅಂಕಪಟ್ಟಿ ಶುಲ್ಕ | 60-00 | 60-00 |
| 4 | ಪರೀಕ್ಷಾ ಶುಲ್ಕ | 302-00 | NIL |
| | ಒಟ್ಟು | **1,694-00** | **1,392-00** |

**ಯಾವುದೇ ಕಾರಣಕ್ಕೂ ಮೇಲೆ ನಮೂದಿಸಿರುವ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ವಸೂಲು ಮಾಡಬಾರದು**

**ಶುಲ್ಕ ಪಾವತಿಸಲು ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:**

| ಕ್ರಮ ಸಂಖ್ಯೆ | ವಿವರ | ಅಭ್ಯರ್ಥಿಗಳು ಕಾಲೇಜಿಗೆ ಶುಲ್ಕ ಪಾವತಿಸಲು ಕಡೇ ದಿನಾಂಕ | ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಖಜಾನೆ ಸಂದಾಯ ಮಾಡುವ ದಿನಾಂಕ | ಕಾಲೇಜಿನವರು ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವ ದಿನಾಂಕ |
|---|---|---|---|---|
| 1. | ದಂಡ ಶುಲ್ಕವಿಲ್ಲದೆ | 28-09-2015 | 29-09-2015 | 30-09-2015 |
| 2. | ದಂಡ ಶುಲ್ಕ ದೊಂದಿಗೆ : ದಿನವೊಂದಕ್ಕೆ ₹.30.00 ರಂತೆ ಗರಿಷ್ಠ ₹.300.00 (ಪರೀಕ್ಷಾ ಶುಲ್ಕದ ಜೊತೆಗೆ) | 14-10-2015 | 15-10-2015 | 16-10-2015 |

**ನಿಗದಿಗೊಳಿಸಿರುವ ದಿನಾಂಕದ ನಂತರ OMR ಅರ್ಜಿಗಳನ್ನು ಸಲ್ಲಿಸಿದಲ್ಲಿ ತಿರಸ್ಕರಿಸಲಾಗುವುದು.**

3. ಶುಲ್ಕವನ್ನು ಖಜಾನೆ ಚಲನ್ ಮೂಲಕ **"0202-01-102-01-07** (ಟ್ಯೂಷನ್ ಮತ್ತು ಇತರೆ ಶುಲ್ಕಗಳು)" ಈ ಲೆಕ್ಕಶೀರ್ಷಿಕೆಗೆ ಜಮಾ ಮಾಡಬೇಕು.
4. ಕಾಲೇಜಿನ ರಶೀತಿ ಪುಸ್ತಕದ ಮೂಲಕ ಸ್ವೀಕರಿಸಲಾದ ನೋಂದಣಿ ಶುಲ್ಕ **₹.60-00** ನ್ನು ಅಂಚೆ ಖರ್ಚು ಹಾಗೂ ಅರ್ಜಿಗಳ ಪರಿಶೀಲನಾ ಸಂಭಾವನೆಯಾಗಿ ಪ್ರಾಂಶುಪಾಲರು ಮತ್ತು ಸಂಬಂಧಿಸಿದ ಸಿಬ್ಬಂದಿ ಉಪಯೋಗಿಸಿಕೊಳ್ಳುವುದು.

**IV. ಅಭ್ಯರ್ಥಿಯು ಅರ್ಜಿಯ ಜೊತೆಗೆ ಕಾಲೇಜಿಗೆ ಸಲ್ಲಿಸಬೇಕಾಗಿರುವ ದಾಖಲೆಗಳು:**

1. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೂಲ **(Original)** ಉತ್ತೀರ್ಣ ಪ್ರಮಾಣ ಪತ್ರದೊಂದಿಗೆ ಎರಡು ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸುವುದು.
2. ಅಭ್ಯರ್ಥಿಯ ಇತ್ತೀಚಿನ ಮೂರು **ಪಾಸ್‌ಪೋರ್ಟ್ ಸೈಜಿನ** ಭಾವಚಿತ್ರಗಳನ್ನು **(PHOTO)** ಸಲ್ಲಿಸಬೇಕು. (ಪಾಸ್‌ಪೋರ್ಟ್ ಸೈಜಿನದಲ್ಲದೆ ಬೇರೆ ಸೈಜಿನ ಫೋಟೋವನ್ನು ಸಲ್ಲಿಸಬಾರದು).
3. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೂಲ ವರ್ಗಾವಣೆ ಪತ್ರವನ್ನು **(Original Transfer Certificate)** ನೀಡಬೇಕು.
4. ದ್ವಿತೀಯ ಪಿ.ಯು.ಸಿ. ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು, ಪಿಯುಸಿ ಮೂಲ ವರ್ಗಾವಣೆ ಪತ್ರ ಮತ್ತು ದ್ವಿತೀಯ ಪಿ.ಯು.ಸಿ. ಮೂಲ ಅನುತ್ತೀರ್ಣ ಅಂಕಪಟ್ಟಿಯನ್ನು ಸಲ್ಲಿಸಬೇಕು.
5. ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಸಂಸ್ಥೆಯ ಮುಖ್ಯೋಪಾಧ್ಯಾಯರಿಂದ / ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟ ಒಂದು ಭಾವಚಿತ್ರವನ್ನು ಎಸ್.ಎಸ್.ಎಲ್.ಸಿ. ಜೆರಾಕ್ಸ್ ಮಾರ್ಕ್ಸ್‌ಕಾರ್ಡ್ ಪ್ರತಿಗೆ ಅಂಟಿಸಿ ಸಲ್ಲಿಸಬೇಕು.
6. ಸ್ವವಿಳಾಸ ಬರೆದಿರುವ ಮತ್ತು ಅಂಚೆ ಚೀಟಿ ಅಂಟಿಸಿರುವ ಎರಡು ಪೋಸ್ಟಲ್ ಲಕೋಟೆಗಳನ್ನು ನೀಡಬೇಕು. ಈ ಲಕೋಟೆಗಳನ್ನು ಪ್ರಾಂಶುಪಾಲರು ಅಭ್ಯರ್ಥಿಗಳಿಗೆ ಯಾವುದೇ ಮಾಹಿತಿ ತಿಳಿಸುವ ಅಥವಾ ಅವರಿಂದ ತರಿಸಿಕೊಳ್ಳುವ ಉದ್ದೇಶಕ್ಕೆ ಬಳಸಿಕೊಳ್ಳುವುದು.
7. ಅಭ್ಯರ್ಥಿಯು ಅಂಗವಿಕಲರಾಗಿದ್ದಲ್ಲಿ ಜಿಲ್ಲಾ ಸರ್ಜನ್‌ರವರಿಂದ ದೃಢೀಕರಿಸಿದ ವೈದ್ಯಕೀಯ ಪ್ರಮಾಣ ಪತ್ರ ನೀಡಬೇಕು.
8. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ತಹಶೀಲ್ದಾರ್‌ರವರಿಂದ ಪಡೆದ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಸಲ್ಲಿಸಬೇಕು.

**V. ಪ್ರಾಂಶುಪಾಲರು ಖಾಸಗಿ ಅಭ್ಯರ್ಥಿಗಳ ಹೆಸರನ್ನು ನೋಂದಾಯಿಸಿಕೊಳ್ಳುವಾಗ ವಿಶೇಷವಾಗಿ ಗಮನಹರಿಸಬೇಕಾದ ಅಂಶಗಳು:**

1. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಖಾಸಗಿ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಲು ಇಚ್ಛಿಸಿದಲ್ಲಿ ಇಲಾಖೆಯಿಂದ ಅನುಮತಿ ಪಡೆದುಕೊಳ್ಳುವುದು.
2. OMR ನಮೂನೆಗಳನ್ನು ಎಚ್ಚರಿಕೆಯಿಂದ ಭರ್ತಿ ಹಾಗೂ ಶೇಡಿಂಗ್ ಮಾಡಬೇಕು.
3. ಕಾಲೇಜಿನ ಸಮೀಪದ ಸ್ಥಳಗಳಿಂದ ಬರುವ ವಿದ್ಯಾರ್ಥಿಗಳನ್ನು ಮಾತ್ರ ನೋಂದಾಯಿಸಿಕೊಳ್ಳುವುದು. ವಾಸಸ್ಥಳದ ಅಥವಾ ಉದ್ಯೋಗದ ದೃಢೀಕರಣಕ್ಕೆ ಸೂಕ್ತ ದಾಖಲೆಗಳನ್ನು ಪಡೆದು ಪರಿಶೀಲಿಸಿ ದೃಢಪಡಿಸಿಕೊಳ್ಳುವುದು.
4. ಅಭ್ಯರ್ಥಿಯ ವಾಸಸ್ಥಳಕ್ಕೆ ಹತ್ತಿರದ ಪ್ರದೇಶದಲ್ಲಿ ಬೇರೆ ಸರ್ಕಾರಿ ಪ ಪೂ ಕಾಲೇಜು ಇದ್ದಲ್ಲಿ, ಅಂತಹ ಅಭ್ಯರ್ಥಿಗೆ ಆ ಕಾಲೇಜಿನಲ್ಲಿಯೇ ನೋಂದಾಯಿಸಿಕೊಳ್ಳಲು ತಿಳಿಸುವುದು.
5. ಖಾಸಗಿ ಅಭ್ಯರ್ಥಿಗಳಿಗಾಗಿಯೇ ಪ್ರತ್ಯೇಕ ನೋಂದಣಿ ಪುಸ್ತಕವನ್ನು **(Admission Register)** ತೆರೆಯುವುದು. ಹಿಂದಿನ ವರ್ಷಗಳಲ್ಲಿಯೇ ನೋಂದಣಿ ಪುಸ್ತಕವನ್ನು ತೆರೆದಿದ್ದಲ್ಲಿ, ಅದರಲ್ಲಿಯೇ ಮುಂದುವರಿಸುವುದು ಹಾಗೂ ರೆಗ್ಯೂಲರ್ ವಿದ್ಯಾರ್ಥಿಗಳ ರೀತಿ ಎಲ್ಲಾ ವಿವರಗಳನ್ನು ನಮೂದು ಮಾಡಿಕೊಳ್ಳುವುದು.
6. ಅಭ್ಯರ್ಥಿಗಳಿಂದ ಪಡೆಯುವ ಮೂರು ಭಾವಚಿತ್ರಗಳಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಸಂಸ್ಥೆಯ ಮುಖ್ಯೋಪಾಧ್ಯಾಯರಿಂದ / ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟ ಎರಡು ಫೋಟೋಗಳಲ್ಲಿ ಒಂದನ್ನು ಎಸ್.ಎಸ್.ಎಲ್.ಸಿ. ಜೆರಾಕ್ಸ್ ಮಾರ್ಕ್ಸ್‌ಕಾರ್ಡ್‌ಗೆ ಅಂಟಿಸಬೇಕು. ಇನ್ನೊಂದು ಭಾವಚಿತ್ರವನ್ನು ದಾಖಲಾತಿ ಪುಸ್ತಕದಲ್ಲಿ ಅಂಟಿಸಿ ವಿದ್ಯಾರ್ಥಿಯ ಸಹಿ ಪಡೆಯಬೇಕು. **ದೃಢೀಕರಣವಿಲ್ಲದ** ಮೂರನೇ ಫೋಟೋವನ್ನು OMR ಅರ್ಜಿಯ ಮೇಲೆ ಅಂಟಿಸಬೇಕು.
7. ನೋಂದಣಿ ಸಮಯದಲ್ಲಿ ಅಭ್ಯರ್ಥಿಗಳಿಂದ ಪಡೆಯುವ ಮೂಲ ವರ್ಗಾವಣೆ ಪತ್ರ ಹಾಗೂ ಇನ್ನಿತರೆ ದಾಖಲೆಗಳ ಪ್ರತಿಗಳನ್ನು ಕಾಲೇಜಿನಲ್ಲಿಯೇ ಕಾಯ್ದಿರಿಸುವುದು. ಎಸ್.ಎಸ್.ಎಲ್.ಸಿ. ಮೂಲ ಪ್ರಮಾಣ ಪತ್ರವನ್ನು ಮಾತ್ರ ಪ್ರವೇಶ ಪತ್ರ ವಿತರಿಸಿದ ನಂತರ ಅಭ್ಯರ್ಥಿಗಳಿಗೆ ಹಿಂತಿರುಗಿಸುವುದು.

8. ಬೆಂಗಳೂರು ನಗರದ ಪ್ರತಿ ಕಾಲೇಜಿನಲ್ಲಿ ಗರಿಷ್ಠ 200 (ಇನ್ನೂರು) ಅಭ್ಯರ್ಥಿಗಳನ್ನು ನೋಂದಾಯಿಸಿಕೊಳ್ಳುವುದು. ನಿಗದಿಪಡಿಸಿದ ಸಂಖ್ಯೆಗಿಂತ ಹೆಚ್ಚಿನ ಅಭ್ಯರ್ಥಿಗಳನ್ನು ನೋಂದಾಯಿಸಿಕೊಳ್ಳುವ ಮುನ್ನ ಕೇಂದ್ರ ಕಛೇರಿಯಿಂದ ಕಡ್ಡಾಯವಾಗಿ ಅನುಮತಿ ಪಡೆದುಕೊಳ್ಳುವುದು.
9. ಕರೆಸ್ಪಾಂಡೆನ್ಸ್ ಕಾಲೇಜುಗಳು ಎಂಬ ಹೆಸರಿನೊಂದಿಗೆ ವ್ಯವಹರಿಸುವ ಅಥವಾ ಯಾರೇ ಮಧ್ಯವರ್ತಿಗಳ ಮೂಲಕ ಬರುವ ಅರ್ಜಿಗಳನ್ನು ಮಾನ್ಯ ಮಾಡದೆ ಅವುಗಳನ್ನು ತಿರಸ್ಕರಿಸುವುದು. ಪ್ರತಿ ಅಭ್ಯರ್ಥಿಯು ವೈಯಕ್ತಿಕವಾಗಿ ನೋಂದಾಯಿಸಿಕೊಳ್ಳಲು ಬಂದಲ್ಲಿ ಮಾತ್ರ ಮಾನ್ಯ ಮಾಡುವುದು. ಅಭ್ಯರ್ಥಿಯ ಪರವಾಗಿ ಮತ್ತೊಬ್ಬರು ಅರ್ಜಿ ಸಲ್ಲಿಸಲು ಅವಕಾಶ ನೀಡಬಾರದು.
10. OMR ಅರ್ಜಿ ಹಾಗು ಶುಲ್ಕವನ್ನು ಸ್ವೀಕರಿಸುವಾಗ, ಮೂಲ ದಾಖಲೆ ಪತ್ರಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳನ್ನು ಮಾತ್ರ ನೋಂದಾಯಿಸಿಕೊಳ್ಳುವುದು.
11. ಬಾಲಕಿಯರ ಕಾಲೇಜಿನಲ್ಲಿ ಬಾಲಕಿಯರನ್ನು ಮಾತ್ರ ನೋಂದಾಯಿಸಿಕೊಳ್ಳಬೇಕು.
12. ಕಾಲೇಜಿನ ಇಬ್ಬರು ಉಪನ್ಯಾಸಕರು ದಾಖಲೆಗಳ ಆಧಾರದ ಮೇಲೆ OMR ನಮೂನೆಗಳಲ್ಲಿ ಅಭ್ಯರ್ಥಿಗಳ ಮಾಹಿತಿ ಭರ್ತಿ ಮಾಡಿ ಶೇಡಿಂಗ್ ಮಾಡುವ ಕಾರ್ಯವನ್ನು ನಿರ್ವಹಿಸುವುದು. ಈ ಸಂಬಂಧ ಅನುಬಂಧದಲ್ಲಿ ನೀಡಿರುವಂತೆ ದಸ್ತಾವೇಜನ್ನು ಪ್ರತಿ ಅಭ್ಯರ್ಥಿಗೆ ದ್ವಿಪ್ರತಿಯಲ್ಲಿ ಸಿದ್ಧಪಡಿಸಿ, ಒಂದು ಪ್ರತಿಯನ್ನು ಇತರ ದಾಖಲೆಗಳೊಂದಿಗೆ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
13. ಅಭ್ಯರ್ಥಿಗಳಿಂದ ಮೂಲ ದಾಖಲೆಗಳನ್ನು ಪಡೆಯುವುದರ ಜೊತೆಗೆ, ಅವುಗಳ ಎರಡು ಜೆರಾಕ್ಸ್ ಪ್ರತಿಗಳನ್ನು ಪಡೆದು ಅವುಗಳನ್ನು ಮೂಲ ಪ್ರತಿಗಳೊಂದಿಗೆ ಪರಿಶೀಲಿಸಿ, ದೃಢೀಕರಿಸಿ ಒಂದು ಸೆಟ್ ಜೆರಾಕ್ಸ್ ದಾಖಲಾತಿ ಪ್ರತಿಗಳನ್ನು OMR ಅರ್ಜಿಯೊಡನೆ ಪ್ರತ್ಯೇಕವಾಗಿ ಸಲ್ಲಿಸಬೇಕು. ಉಳಿದ ಒಂದು ಮೂಲ ಹಾಗೂ ಒಂದು ಜೆರಾಕ್ಸ್ ದಾಖಲಾತಿ ಪ್ರತಿಗಳನ್ನು ಕಾಲೇಜಿನಲ್ಲಿಯೇ ಇಟ್ಟುಕೊಳ್ಳುವುದು ಹಾಗೂ ಪರಿಶೀಲನೆಯ ಸಂದರ್ಭದಲ್ಲಿ ಸಲ್ಲಿಸುವುದು.
14. ಎಸ್.ಎಸ್.ಎಲ್.ಸಿ. ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಕಾಲೇಜಿನ ಹಂತಕ್ಕೆ ನಿಗದಿಗೊಳಿಸಿರುವುದರಿಂದ ಕಾಲೇಜಿನ ಪ್ರಾಂಶುಪಾಲರು ಮೂಲ ಪ್ರಮಾಣ ಪತ್ರಗಳನ್ನು ಖುದ್ದಾಗಿ ಪರಿಶೀಲಿಸಿ ನೈಜ್ಯತೆಯನ್ನು ಖಚಿತಪಡಿಸಿಕೊಂಡ ನಂತರ ನೋಂದಾಯಿಸಿಕೊಳ್ಳುವುದು. **ದ್ವಿಪ್ರತಿ ವರ್ಗಾವಣೆ ಪತ್ರದ (DUPLICATE TC) ಆದಾರದ ಮೇಲೆ ನೋಂದಾಯಿಸಿಕೊಂಡಲ್ಲಿ ಅಂತಹ ಅಭ್ಯರ್ಥಿಗಳ ನೋಂದಣಿಯನ್ನು ರದ್ದುಪಡಿಸಲಾಗುವುದು ಹಾಗೂ ಪ್ರಾಂಶುಪಾಲರ ವಿರುದ್ಧ ಶಿಸ್ತು ಕ್ರಮ ಜರಗಿಸಲಾಗುವುದು.**
15. ಸಲ್ಲಿಸಲಾದ OMR ಅರ್ಜಿಯನ್ನು ಇಲಾಖೆಯು ಪರಿಗಣಿಸಿರುವ ಬಗ್ಗೆ ಅಥವಾ ತಿರಸ್ಕರಿಸಿರುವ ಬಗ್ಗೆ ಜನವರಿ ತಿಂಗಳಿನಲ್ಲಿ ಸಂಬಂಧಿಸಿದ ಪ್ರಾಂಶುಪಾಲರ ಗಮನಕ್ಕೆ ತರಲಾಗುವುದು.
16. **ಖಾಸಗಿ ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರಗಳನ್ನು ರ್‍ಯಾಂಡಮ್ ಆಗಿ ಆಯ್ಕೆ ಮಾಡಿ ಪ್ರವೇಶ ಪತ್ರಗಳನ್ನು ನೀಡಲಾಗುವುದು.**
17. ನಿರ್ದೇಶನಾಲಯದಿಂದ ಹಾಗೂ ಜಿಲ್ಲಾ ಉಪನಿರ್ದೇಶಕರ ಕಛೇರಿಯಿಂದ ಅಧಿಕಾರಿಗಳು ತಪಾಸಣೆ ಮಾಡಲು ಬರುವುದರಿಂದ ಪರಿಶೀಲನೆಗಾಗಿ ಮೂಲ ದಾಖಲೆಗಳನ್ನು ಒದಗಿಸುವುದು.

**VI. OMR ನಮೂನೆಗಳೊಂದಿಗೆ ಪ್ರಾಂಶುಪಾಲರು ಆಯಾ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸಬೇಕಾಗಿರುವ ದಾಖಲೆಗಳು:**

1 ಭರ್ತಿ ಹಾಗೂ ಶೇಡಿಂಗ್ ಮಾಡಲಾದ OMR ನಮೂನೆಗಳು.

2 10ನೇ ತರಗತಿಯ ಉತ್ತೀರ್ಣ ಪ್ರಮಾಣ ಪತ್ರದ ದೃಢೀಕೃತ ಜೆರಾಕ್ಸ್ ಪ್ರತಿ, ವರ್ಗಾವಣೆ ಪತ್ರದ ದೃಢೀಕೃತ ಜೆರಾಕ್ಸ್ ಪ್ರತಿ, ವಾಸಸ್ಥಳದ ದೃಢೀಕರಣ ಪತ್ರ ಮತ್ತು ಭರ್ತಿ ಮಾಡಿ ದೃಢೀಕರಿಸದ ಅನುಬಂಧ.

3 ಶುಲ್ಕ ಪಾವತಿಸಿರುವ ಮೂಲ ಚಲನ್ ಹಾಗೂ ಶುಲ್ಕ ಪಾವತಿಸಿದ ಎಲ್ಲಾ ವಿವರಗಳ Fee Statement.

4 OMR ನಮೂನೆಗಳು ಹಾಗೂ ದಾಖಲಾತಿ ಜೆರಾಕ್ಸ್ ಪ್ರತಿಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿ, ಪ್ರತ್ಯೇಕ ಕಟ್ಟುಗಳನ್ನು ಮಾಡುವುದು. OMR ನಮೂನೆಗಳಿಗೆ ನೀಡಲಾಗುವ ಕ್ರಮ ಸಂಖ್ಯೆಯನ್ನೇ ಜೆರಾಕ್ಸ್ ಪ್ರತಿಗಳಿಗೆ ನೀಡಿ ಜೆರಾಕ್ಸ್ ದಾಖಲೆ ಹಾಗೂ Fee Statement ಮತ್ತು ಶುಲ್ಕ ಪಾವತಿಸಿದ ಚಲನ್‌ನ್ನು ಒಂದೇ ಲಕೋಟೆಯಲ್ಲಿಡುವುದು. OMR ನಮೂನೆಗಳನ್ನು ಮಾತ್ರ ಪಾಲಿಥಿನ್ ಕವರ್‌ನಲ್ಲಿರಿಸುವುದು.

5 ಕಾಲೇಜಿನಲ್ಲಿ ಖಾಸಗಿ ಅಭ್ಯರ್ಥಿಗಳ ನೋಂದಣಿ ಇಲ್ಲದಿದ್ದಲ್ಲಿ ಕಡ್ಡಾಯವಾಗಿ "ಶೂನ್ಯ ವರದಿಯನ್ನು" (Nil Report) ಕಳುಹಿಸುವುದು.

6 ಅಭ್ಯರ್ಥಿಗಳಿಂದ ಪಡೆದ ಇನ್ನುಳಿದ ದಾಖಲೆಗಳನ್ನು ಕಾಲೇಜಿನಲ್ಲಿಯೇ ಕಾಯ್ದಿರಿಸುವುದು.

OMR ನಮೂನೆಗಳು ಹಾಗೂ ಮೇಲೆ ತಿಳಿಸಿರುವ ದಾಖಲೆಗಳನ್ನು ಬಂಡಲ್ ಮಾಡಿ ಲಕೋಟೆಯ ಮೇಲೆ ಕಾಲೇಜಿನ ಸಂಕೇತ ಸಂಖ್ಯೆ ಮತ್ತು ವಿಳಾಸದೊಂದಿಗೆ **"ಖಾಸಗಿ ಅಭ್ಯರ್ಥಿಗಳ ಅರ್ಜಿಗಳು"** ಎಂದು ಬರೆದು ದಿನಾಂಕ 30-09-2015 (ದಂಡ ಶುಲ್ಕವಿಲ್ಲದ OMR ಅರ್ಜಿಗಳನ್ನು) ಮತ್ತು 16-10-2015 (ದಂಡ ಶುಲ್ಕದೊಂದಿಗಿನ) OMR ಅರ್ಜಿಗಳನ್ನು) **ಆಯಾ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು.**

**VII. ಖಾಸಗಿ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿ ಉತ್ತೀರ್ಣರಾದ ನಂತರ ಪ್ರಾಂಶುಪಾಲರು ಅಭ್ಯರ್ಥಿಗಳಿಗೆ ನೀಡಬೇಕಾದ ದಾಖಲೆಗಳು.**

ಖಾಸಗಿ ಅಭ್ಯರ್ಥಿಗಳಿಗೆ ಉತ್ತೀರ್ಣ ಪ್ರಮಾಣ ಪತ್ರದ ಜೊತೆಗೆ ವರ್ಗಾವಣೆ ಪತ್ರ ನೀಡುವುದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ:

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರಿಗೆ – ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಅಂಟಿಸಲು ತಿಳಿಸಿದೆ.
2. ಪಿ.ಯು.ಸಿ. ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ.
4. ಗಣಕಶಾಖೆಗೆ.
5. ಇಲಾಖಾ ಇ-ಆಡಳಿತ ಶಾಖೆ., (ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
6. ಕಛೇರಿ ಪ್ರತಿ.

“ಅನುಬಂಧ”

## ದ್ವಿತೀಯ ಪಿಯುಸಿ ಪರೀಕ್ಷೆಯ ಖಾಸಗಿ ಅಭ್ಯರ್ಥಿಗಳ ಮಾಹಿತಿ ಒದಗಿಸುವ ನಮೂನೆ

ಅಭ್ಯರ್ಥಿ ______________ ತಂದೆ ____________ ಇವರು ನಮ್ಮ ಕಾಲೇಜಿನ ಮುಖಾಂತರ ಖಾಸಗಿ ಅಭ್ಯರ್ಥಿಯಾಗಿ 2016ರ ಮಾರ್ಚ್ ದ್ವಿತೀಯ ಪಿಯುಸಿ ಪರೀಕ್ಷೆಗೆ ನೋಂದಾಯಿಸಲು ಅರ್ಜಿ ಸಲ್ಲಿಸಿರುತ್ತಾರೆ. ಇವರು 10ನೇ ತರಗತಿ ಪರೀಕ್ಷೆಯನ್ನು _________ ನೋಂದಣಿ ಸಂಖ್ಯೆಯ ಮೂಲಕ _____ ವರ್ಷದಲ್ಲಿ _______________________. ಶಾಲೆ / ಕ್ಶಾಲೇಜಿನಲ್ಲಿ ತೇರ್ಗಡೆಯಾಗಿರುತ್ತಾರೆ.

ಅಭ್ಯರ್ಥಿಯು **10**ನೇ ತರಗತಿ ತೇರ್ಗಡೆಯಾಗಿದ್ದು, **10**ನೇ ತರಗತಿ ಪಾಸಾದ ಶಾಲೆ / ಕಾಲೇಜಿನ ಮುಖ್ಯಸ್ಥರು ಅಭ್ಯರ್ಥಿಯ ಫೋಟೋ ದೃಢೀಕರಿಸಿದ್ದಾರೆ.

ಅಭ್ಯರ್ಥಿಯು ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದು ಪಿಯುಸಿ ಓದಿದ ಕಾಲೇಜಿನ ಪ್ರಾಂಶುಪಾಲರು ಅಭ್ಯರ್ಥಿಯ ಫೋಟೋ ದೃಢೀಕರಿಸಿದ್ದಾರೆ.

**10**ನೇ ತರಗತಿ ಮೂಲ ಅಂಕಪಟ್ಟಿ / ಜನ್ಮ ದಿನಾಂಕ ದೃಢೀಕರಣಕ್ಕಾಗಿ ಪಡೆದ ಮೂಲ ದಾಖಲೆಗಳನ್ನು ಕಾಲೇಜಿನಲ್ಲಿ ಉಳಿಸಿಕೊಂಡು, ಇವುಗಳ ದೃಢೀಕೃತ ಫೋಟೋಪ್ರತಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ಅಭ್ಯರ್ಥಿಯು ಸಲ್ಲಿಸಿರುವ ದಾಖಲೆಗಳನ್ನು ನಾನು ಖುದ್ದಾಗಿ ಪರಿಶೀಲಿಸಿ ಎಲ್ಲಾ ದಾಖಲೆಗಳು ಅಸಲಿಯಾಗಿವೆ ಹಾಗೂ ಒದಗಿಸಿರುವ ಮಾಹಿತಿಗಳು ಇಲಾಖೆಯ ಅಧಿಸೂಚನೆಯ ಪ್ರಕಾರ ಸರಿಯಾಗಿದೆ ಎಂಬುದನ್ನು ಖಚಿತಪಡಿಸಿಕೊಂಡು, ಇವರು 2016ರ ಮಾರ್ಚ್ ದ್ವಿತೀಯ ಪಿಯುಸಿ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಯಾಗಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿದ್ದಾರೆ ಎಂಬುದಾಗಿ ದೃಢೀಕರಿಸಿರುತ್ತೇನೆ. ನಮ್ಮ ಕಾಲೇಜಿನ ಇಬ್ಬರು ಹಿರಿಯ ಉಪನ್ಯಾಸಕರು ಈ ದಾಖಲೆಗಳನ್ನು ಪರಿಶೀಲಿಸಿದ್ದಾರೆ.

<u>ದಾಖಲೆಗಳನ್ನು ಪರಿಶೀಲಿಸಿದ ಉಪನ್ಯಾಸಕರ ಹೆಸರು ಮತ್ತು ಸಹಿ</u>

| | ಹೆಸರು | ಸಹಿ |
|---|---|---|
| 1. | | |
| 2. | | |

ಸ್ಥಳ :
ದಿನಾಂಕ:

ಪ್ರಾಂಶುಪಾಲರ ಸಹಿ,
ಕಾಲೇಜಿನ ಮೊಹರು.

ಲಗತ್ತುಗಳು:

1. 10ನೇ ತರಗತಿ ಪಾಸಾದ ದೃಢೀಕೃತ ಅಂಕಪಟ್ಟಿ/ಪ್ರಮಾಣ ಪತ್ರ.
2. ಮೂಲ ವರ್ಗಾವಣೆ ಪತ್ರದ ದೃಢೀಕೃತ ಪ್ರತಿ.
3. ವಾಸಸ್ಥಳ ದೃಢೀಕರಣ ಪತ್ರದ ದೃಢೀಕೃತ ಪ್ರತಿ.